Remove Watermark Now

# ಆಯುರ್ವೇದದಲ್ಲಿ ಲಭ್ಯವಿರುವ ಅಪೂರ್ವ ಚಿಕಿತ್ಸೆಗಳು

**ಅಕ್ಟೋಬರ್ 12, 2021**

ನಮ್ಮ ಶ್ರೀ ವೀರ ಪುಲಿಕೇಶಿ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ ಆಸ್ಪತ್ರೆ ಹಾಗೂ ಸಂಶೋಧನಾ ಕೇಂದ್ರ, ಬಾದಾಮಿ ಕಾಲೇಜು ಉತ್ತಮ ಶಾಸ್ತ್ರಜ್ಞಾನ ಹಾಗೂ ಸುಜ್ಞಾನವಂತ ವೈದ್ಯ ಅಧ್ಯಾಪಕರನ್ನು ಒಳಗೊಂಡಿರುವ ಹೆಮ್ಮೆಯ ಸಂಸ್ಥೆಯಾಗಿದೆ. ನಮ್ಮಲ್ಲಿ ಅತ್ಯಂತ ಕ್ಲಿಷ್ಟಕರವಾದ ವ್ಯಾದಿಗಳಿಗೆ ಹಾಗೂ ಅಸಂಖ್ಯೆ ರೋಗಗಳಿಗೆ ಪೂರ್ನಜನ್ಮ ನೀಡಿದ ನಾರಾಯಣ ಸ್ವರೂಪಿ ವೈದ್ಯವೃಂದವೇ ಇದೆ.

ಸರ್ ಇಂತಹ ವ್ಯಾಧಿತನೋರ್ವನಿಗೆ ಯಾವರೀತಿ ಚಿಕಿತ್ಸೆ ಬೇಕು ತಿಳಿಯುತ್ತಿಲ್ಲ ಎಂದು ದೂರವಾಣಿಯ ಮೂಲಕ ರೋಗಿಯ ಸ್ಥಿತಿಗತಿಯ ವಿವರ ನೀಡಿದರೂ ತತ್ಕ್ಷಣ ಸ್ಪಂದಿಸಿ ಮಾರ್ಗದರ್ಶನ ನೀಡುತ್ತೇವೆ. ಹಲವಾರು ಬಾರಿ ನಾವು ನೀಡಿರುವ ಚಿಕಿತ್ಸೆ ಫಲಿಸಿ ಅವರು ತಮ್ಮ ದಿನಚರ್ಯವನ್ನು ಯಾವ ಅಡೆತಡೆ ಇಲ್ಲದೆ ಮುಂದುವರೆಸುತ್ತಿದ್ದಾರೆ. ಅವರ ಸಂಸ್ಮರಣ ವೇಳೆಯಲ್ಲಿ ಹಂಚಿಕೊಳ್ಳುವ ಮಹಾಭಾಗ್ಯಕ್ಕಾಗಿ ಈ ಬರಹ.

26 ವರ್ಷದ ವಿವಾಹಿತರೋರ್ವರನ್ನು ನಮ್ಮ ಪಂಚಕರ್ಮ ಉತ್ಸಾಹ ಕೇಂದ್ರಕ್ಕೆ ಕರೆತರಲಾಯಿತು ಇಪ್ಪತ್ತು ಹೆಜ್ಜೆ ನಡೆಯಲು 10 ನಿಮಿಷ ತಗೆದುಕೋಳ್ಳುವ ಹಾಗೂ ತೀವ್ರವೇದನ ಸಹಿಸಲು ಅಸಾಧ್ಯ ಸ್ಥಿತಿ ಅವರದ್ದು. ಸೊಂಟ ಭಾಗದ(**L1,L2,L4&L5**) ಮೂಳೆಗಳ ಜಾರುವಿಕೆ **(Disc prolapse)** ಅದಕ್ಕೆ ಕಾರಣವಾಗಿತ್ತು ಎಂದು (**ಒಖಖ ಖಛಿಚಿಟ**) ಮೂಲಕ ನಿರ್ಧರಿಸಿ ಶಸ್ತ್ರಚಿಕಿತ್ಸೆ ಸಜ್ಜುಗೊಳಿಸಲಾಗಿತ್ತು. ಆದರೆ ಈ ರೀತಿಯ ಶಸ್ತ್ರಚಿಕಿತ್ಸೆಯಿಂದ ಅಪಾಯವಿದೆ ಎಂದು ಹತ್ತಿರ ಸಂಭಂದಿಯೊಬ್ಬರ ಕಹಿ ಅನುಭವದಿಂದ ಕಂಗಾಲಾಗಿ ಅದಕ್ಕೆ ಸಿದ್ದರಾಗದೆ ಆ ರೋಗಿ ಪಂಚಕರ್ಮ ಚಿಕಿತ್ಸೆಗಾಗಿ ಬಂದಿದ್ದರು. ಇಂತಹ ಗಂಭೀರ ಸಮ್ಯಸೆಯ ನಿರ್ವಹಣೆ ಕಷ್ಟವೆನಿಸಿದ್ದು ಆಪತ್ಬಾಂಧವ ನಮ್ಮ ಎಸ್.ವಿ.ಪಿ ಆಯುರ್ವೇದ ಆಸ್ಪತ್ರೆ ನೀಡಿದ **ಚಿಕಿತ್ಸೆ,** ಸಹಕಾರವು, ರೋಗಿಯು ಸಂಪೂರ್ಣವಾಗಿ ಗುಣಮುಖವಾಗಲು ಸಹಾಯವಾಗಿದೆ.

**ಚಿಕಿತ್ಸೆ ವಿವರ:–**

1) ಕಟಿಬಸ್ತಿ 7 ದಿನ ಕ್ಷೀರಬಲಾ ತೈಲದಿಂದ (ರಸಶಾಸ್ತ್ರ ವಿಭಾಗದಲ್ಲಿ ನಿರ್ಮಿತ)
2) ಆಮಪಾಚನ,
3) ಆರೋಹಣ ಸ್ನೇಹಪಾನ, ಸ್ವೇದನ,
   ಅಭ್ಯಂಗ ಕಾರ್ಪಸ್ಥ್ಯಾದಿತೈಲದಿಂದ ಮಾಡಿಸಲಾಗಿದ್ದು.
   ಹಾಗೂ ಸ್ನಿಗ್ದ ವಿರೇಚನ 14 ವೇಗಗಳನ್ನು ಒಳಗೊಂಡಿದೆ.
   ಸಮ್ಯಕ್ತ ವಿರೇಚನ ನಂತರ ಸಂಸರ್ಜನಕ್ರಮ 8 ದಿನ ಹಾಗೂ ವಿಶ್ರಾಂತಿ ನಂತರ
4) ಯೋಗಭಸ್ತಿ–ಅನುವಾಸನಭಸ್ತಿ ಅಶ್ವಗಂಧಾದಿ ಯಮಕದಿಂದ ಹಾಗೂ ಸ್ನಿಗ್ದ ದ್ರವ್ಯ ಗುಗ್ಗುಲ ತಿಕ್ತಕ ಘೃತ ಒಳಗೊಂಡ ನಿರುಹ ಕ್ಷೀರಭಸ್ತಿ.

Remove Watermark Now

ಒಟ್ಟು 24 ದಿನಗಳ **ಚಿಕಿತ್ಸೆಯ** ನಂತರ ರೋಗಿ ಸಂಪೂರ್ಣ ಗುಣಮುಖವಾಗಿದ್ದಾನೆ. ಇಂದು ಆತ ಬೈಕ ಸವಾರಿ ಮಾಡುವಷ್ಟು ಸಮರ್ಥನಾಗಿದ್ದನೆ. ಈ ರೋಗಿಯ ಸ್ವ-ಹಸ್ತಾಕ್ಷರದಲ್ಲಿ ಅವರ ಅನುಭವನ್ನು ದಾಖಲಿಸಿ ಕೊಂಡಿರುತ್ತೇವೆ.

ರೋಗಿಯ ಪ್ರಕೃತಿ,ರೋಗದ ಸ್ಥಿತಿ, ದೇಶ,ಕಾಲ ಹಾಗೂ ದೋಷ ಮಾರ್ಗಗಳಿಗೆ ಅನುಸಾರವಾಗಿ **ಚಿಕಿತ್ಸೆ** ಕ್ರಮ ಔಷದಿ, ತೈಲಾದಿಗಳ ಆಯ್ಕೆಯನ್ನು ಮಾಡುತ್ತೇವೆ. ಇದೆ ತರಹದ ಬೇರೆ ರೋಗಿಗಳು ಬಂದಾಗ **ಚಿಕಿತ್ಸೆ**ಯನ್ನು ಕೊಡಲಾಗುವುದು.

ಹಲವು ಆಯುರ್ವೇದ ವಿದ್ಯಾರ್ಥಿಗಳಿಗೆ ಪಂಚಕರ್ಮ ಕ್ರಿಯೆ ಹಾಗೂ ಇತರ ಶಾಸ್ತ್ರೋತ್ತ ಆಯುರ್ವೇದ ಚಿಕಿತ್ಸೆ ಗಳನ್ನು (ಅಸ್ತಮ ಶಿಬಿರ ಮತ್ತು ಸ್ವರ್ಣಬಿಂದು ಪ್ರಾಶನ) ನಮ್ಮ ಆಯುರ್ವೇದ ಬಗ್ಗೆ ತಿಳುವಳಿಕೆ, ಜ್ಞಾನ, ಮತ್ತು ಪಂಚಕರ್ಮ ಚಿಕಿತ್ಸೆಗಳನ್ನು ವಿದ್ಯಾರ್ಥಿಗಳಿಂದಲೇ ಮಾಡಿಸಿ ಧೈರ್ಯ ಉತ್ಸಾಹವನ್ನು ತುಂಬುವಂತಹ ಕೆಲಸ ನಮ್ಮ ಶ್ರೀ ವೀರ ಪುಲಿಕೇಶಿ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ ಆಸ್ಪತ್ರೆಯಲ್ಲಿ ಮಾಡಲಾಗುವುದು.

ಧನ್ಯವಾದಗಳು

pdfelement

**ಡಾ. ರುದ್ರಾಕ್ಷಿ ಅ. ಮಾಳವಾಡ**
ಪ್ರಾಧ್ಯಾಪಕರು
ಶ್ರೀ ವೀರ ಪುಲಿಕೇಶಿ ಗ್ರಾಮೀಣ ಆಯುರ್ವೇದ ಮಹಾವಿದ್ಯಾಲಯ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರ, ಬಾದಾಮಿ